ಸೂ. 31 **76. ಅದ್ದಹ್ರ್** ರು. 2

اٰیاتها ٣١ سُوْرَةُ الدَّهْرِ مَكِّیَّةٌ رکوعاتها ٢

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِیْمِ ○

1. ಮಾನವನ ಮೇಲೆ- ಅವನೊಂದು ಪ್ರಸ್ತಾವನೀಯ ವಸ್ತುವೇ ಆಗಿರದಂತಹ ಸುದೀರ್ಘ ಕಾಲವೊಂದು ಕಳೆದಿದೆಯೇ?[1]

هَلْ اَتٰى عَلَى الْاِنْسَانِ حِیْنٌ مِّنَ الدَّهْرِ لَمْ یَكُنْ شَیْـًٔا مَّذْكُوْرًا ①

2. ನಾವು ಮಾನವನನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು. ಅವನನ್ನು ಪರೀಕ್ಷಿಸಲಿಕ್ಕಾಗಿ[2] ಮತ್ತು ಈ ಉದ್ದೇಶದಿಂದ ನಾವು ಅವನನ್ನು ಆಲಿಸುವವನಾಗಿ ಹಾಗೂ ವೀಕ್ಷಿಸುವವನಾಗಿ ಮಾಡಿದೆವು.

اِنَّا خَلَقْنَا الْاِنْسَانَ مِنْ نُّطْفَةٍ اَمْشَاجٍ ۖۗ نَّبْتَلِیْهِ فَجَعَلْنٰهُ سَمِیْعًۢا بَصِیْرًا ②

3. ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ.[3]

اِنَّا هَدَیْنٰهُ السَّبِیْلَ اِمَّا شَاكِرًا وَّ اِمَّا كَفُوْرًا ③

4. ಸತ್ಯನಿಷೇಧಿಗಳಿಗೆ ನಾವು ಸಂಕೋಲೆಗಳನ್ನೂ ಕಂಠಕಡಗಗಳನ್ನೂ ಧಗಧಗಿಸುವ ಅಗ್ನಿಯನ್ನೂ ಸಿದ್ಧಗೊಳಿಸಿಟ್ಟಿದ್ದೇವೆ.

اِنَّاۤ اَعْتَدْنَا لِلْكٰفِرِیْنَ سَلٰسِلَاۡ وَ اَغْلٰلًا وَّ سَعِیْرًا ④

5. ಸಜ್ಜನರು (ಸ್ವರ್ಗದಲ್ಲಿ) ಕರ್ಪೂರ ಜಲ ಮಿಶ್ರಿತ ಪಾನಪಾತ್ರೆಯಿಂದ ಕುಡಿಯುವರು.

اِنَّ الْاَبْرَارَ یَشْرَبُوْنَ مِنْ كَاْسٍ كَانَ مِزَاجُهَا كَافُوْرًا ⑤

6. ಇದೊಂದು ಹರಿಯುತ್ತಿರುವ ಚಿಲುಮೆಯಾಗಿದ್ದು ಅದರ ನೀರಿನೊಂದಿಗೆ ಅಲ್ಲಾಹನ ದಾಸರು ಮದಿರಾಪಾನ ಮಾಡುವರು ಮತ್ತು ತಾವಿಚ್ಛಿಸಿದೆಡೆ ನಿರಾಯಾಸವಾಗಿ ಅದರ ಶಾಖೆಗಳನ್ನು ಹೊರಡಿಸುವರು.

عَیْنًا یَّشْرَبُ بِهَا عِبَادُ اللّٰهِ یُفَجِّرُوْنَهَا تَفْجِیْرًا ⑥

---

1. ಇಲ್ಲಿ ಪ್ರಶ್ನೆ ಕೇಳುವುದು ಉದ್ದೇಶವಲ್ಲ. ಬದಲಾಗಿ, “ಹೌದು, ಅವನು ಅಂತಹ ಅವಸ್ಥೆಯ ಮೂಲಕ ದಾಟಿದ್ದಾನೆ” ಎಂದು ಮಾನವ ಸ್ವತಃ ಒಪ್ಪಿಕೊಳ್ಳುವಂತೆ ಮಾಡುವುದು ಹಾಗೂ ಮೊದಲು ಅವನನ್ನು ಶೂನ್ಯದಿಂದ ಸೃಷ್ಟಿಸಲಾಗಿರುವಾಗ ಮತ್ತೊಮ್ಮೆ ಸೃಷ್ಟಿಸಲು ಯಾಕೆ ಸಾಧ್ಯವಿಲ್ಲವೆಂದು ಅವನನ್ನು ಆಲೋಚಿಸುವಂತೆ ನಿರ್ಬಂಧಿಸುವುದು ಇದರ ಉದ್ದೇಶವಾಗಿದೆ.
2. ಅರ್ಥಾತ್- ಅವನನ್ನು ಅರಿವು ಮತ್ತು ಪ್ರಜ್ಞೆಯುಳ್ಳವನನ್ನಾಗಿ ಮಾಡಿದೆವು.
3. ಅರ್ಥಾತ್- ಸತ್ಯನಿಷೇಧ ಅಥವಾ ದೇವಸ್ತುತಿಯ ಪೈಕಿ ಯಾವುದನ್ನು ಬೇಕಾದರೂ ನೆಚ್ಚಿಕೊಳ್ಳುವ ಅಧಿಕಾರವನ್ನು ಅವನಿಗೆ ನೀಡುವುದರ ಜತೆಗೆ ಸತ್ಯನಿಷೇಧದ ಮಾರ್ಗ ಯಾವುದು, ದೇವಸ್ತುತಿಯ ಮಾರ್ಗ ಯಾವುದು ಎಂದು ಅವನಿಗೆ ತಿಳಿಸಿದೆವು.

7. ಇವರು (ಭೂಲೋಕದಲ್ಲಿ) ಹರಕೆ ಪೂರ್ತಿಗೊಳಿಸುವವರು.[4] ಎಲ್ಲೆಲ್ಲೂ ವಿಪತ್ತೇ ಹಬ್ಬಿ ಕೊಂಡಿರುವ ಆ ದಿನವನ್ನು ಭಯ ಪಡುವವರೂ ಆಗಿರುವರು.

يُوفُونَ بِالنَّذْرِ وَيَخَافُونَ يَوْمًا كَانَ شَرُّهُ مُسْتَطِيرًا ۝٧

8. ಮತ್ತು ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ.

وَيُطْعِمُونَ الطَّعَامَ عَلَىٰ حُبِّهِ مِسْكِينًا وَيَتِيمًا وَأَسِيرًا ۝٨

9. (ಮತ್ತು ಅವರೊಡನೆ ಹೇಳುತ್ತಾರೆ,) "ನಾವು ನಿಮಗೆ ಕೇವಲ ಅಲ್ಲಾಹನಿಗಾಗಿ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ.

إِنَّمَا نُطْعِمُكُمْ لِوَجْهِ اللَّهِ لَا نُرِيدُ مِنكُمْ جَزَاءً وَلَا شُكُورًا ۝٩

10. ನಮಗಂತು, ನಮ್ಮ ಪ್ರಭುವಿನಿಂದ ಆ ತೀವ್ರ ಕಾಠಿಣ್ಯದ ಅತ್ಯಂತ ಸುದೀರ್ಘ ದಿನದ ಭಯವಿದೆ."

إِنَّا نَخَافُ مِن رَّبِّنَا يَوْمًا عَبُوسًا قَمْطَرِيرًا ۝١٠

11. ಅಲ್ಲಾಹನು ಅವರನ್ನು ಆ ದಿನದ ಕೇಡಿನಿಂದ ರಕ್ಷಿಸುವನು ಮತ್ತು ಅವರಿಗೆ ಉಲ್ಲಾಸವನ್ನೂ ಹರ್ಷವನ್ನೂ ನೀಡುವನು.

فَوَقَاهُمُ اللَّهُ شَرَّ ذَٰلِكَ الْيَوْمِ وَلَقَّاهُمْ نَضْرَةً وَسُرُورًا ۝١١

12. ಮತ್ತು ಅವರ ಸಹನೆಯ ಪ್ರತಿಫಲವಾಗಿ[5] ಅವರಿಗೆ ಸ್ವರ್ಗೋದ್ಯಾನವನ್ನೂ ರೇಶ್ಮೆಯ ಉಡುಪನ್ನೂ ದಯಪಾಲಿಸುವನು.

وَجَزَاهُم بِمَا صَبَرُوا جَنَّةً وَحَرِيرًا ۝١٢

13. ಅಲ್ಲಿ ಅವರು ಉನ್ನತ ಪೀಠಗಳ ಮೇಲೆ ದಿಂಬುಗಳಿಗೊರಗಿ ಕುಳಿತಿರುವರು. ಅಲ್ಲಿ ಬಿಸಿಲಿನ ಧಗೆಯಾಗಲಿ, ಚಳಿಯ ತೀವ್ರತೆಯಾಗಲಿ ಅವರನ್ನು ಬಾಧಿಸಲಾರದು.

مُّتَّكِئِينَ فِيهَا عَلَى الْأَرَائِكِ ۖ لَا يَرَوْنَ فِيهَا شَمْسًا وَلَا زَمْهَرِيرًا ۝١٣

14. ಸ್ವರ್ಗೋದ್ಯಾನದ ನೆರಳು ಅವರ ಮೇಲೆ ಬಾಗಿ ಹರಡಿರುವುದು ಮತ್ತು (ಯಥೇಷ್ಟವಾಗಿ ಕೊಯ್ದುಕೊಳ್ಳುವಂತೆ) ಅದರ ಫಲಗಳು ಸದಾ ಅವರಿಗೆ ಎಟಕುತ್ತಿರುವುವು.

وَدَانِيَةً عَلَيْهِمْ ظِلَالُهَا وَذُلِّلَتْ قُطُوفُهَا تَذْلِيلًا ۝١٤

15. ಅವರ ಮುಂದೆ ಬೆಳ್ಳಿಯ ಪಾತ್ರೆಗಳನ್ನೂ[6] ಗಾಜಿನ ಲೋಟಗಳನ್ನೂ ಸುತ್ತು ತರಲಾಗುವುದು-

وَيُطَافُ عَلَيْهِم بِآنِيَةٍ مِّن فِضَّةٍ وَأَكْوَابٍ كَانَتْ قَوَارِيرَا ۝١٥

4. ಹರಕೆಯೆಂದರೆ ದೇವನ ಜತೆ ಅವನ ಸಂಪ್ರೀತಿ ಗಳಿಸಲು ಕಡ್ಡಾಯ ಕೆಲಸವಲ್ಲದೆ ಇತರ ಯಾವುದಾದರೂ ಸತ್ಕಾರ್ಯವನ್ನೂ ಮಾಡುತ್ತೇನೆಂದು ಪ್ರತಿಜ್ಞೆ ಮಾಡುವುದು.

5. 'ಸಹನೆ' ಎಂಬ ಪದವನ್ನು ಇಲ್ಲಿ ಯಾವ ಅರ್ಥದಲ್ಲಿ ಬಳಸಲಾಗಿದೆ ಎಂದರೆ- ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ಅವರು ಮರಣದ ತನಕವೂ ಅಲ್ಲಾಹನ ಆಜ್ಞಾಪಾಲನೆ ಮಾಡುತ್ತಿದ್ದರು ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರುತ್ತಿದ್ದರು.

6. ಸೂರಃ ಅಝ್ಝುಖ್ರುಫ್‌ನ 71ನೆಯ ಸೂಕ್ತದಲ್ಲಿ ಅವರ ಮುಂದೆ ಚಿನ್ನದ ಪಾತ್ರೆಗಳನ್ನು ತಿರುಗಿಸಲಾಗುತ್ತಿರುವುದು ಎಂದು ಹೇಳಲಾಗಿದೆ.

16. ಆ ಗಾಜುಗಳು ಕೂಡಾ ಬೆಳ್ಳಿಯ ತರದವುಗಳಾಗಿರುವುವು.[7] ಅವುಗಳನ್ನು (ಸ್ವರ್ಗದ ವ್ಯವಸ್ಥಾಪಕರು) ಸರಿಯಾದ ಪ್ರಮಾಣದಲ್ಲಿ ತುಂಬಿಸಿರುವರು.

قَوَارِيرَا۟ مِن فِضَّةٍ قَدَّرُوهَا تَقْدِيرًا ﴿١٦﴾

17. ಅಲ್ಲಿ ಅವರಿಗೆ ಶುಂಠಿ ಬೆರೆತಿರುವಂತಹ ಮದಿರೆಯನ್ನು ಕುಡಿಸಲಾಗುವುದು.[8]

وَيُسْقَوْنَ فِيهَا كَأْسًا كَانَ مِزَاجُهَا زَنجَبِيلًا ﴿١٧﴾

18. ಇದೊಂದು ಸ್ವರ್ಗದ ಚಿಲುಮೆಯಾಗಿದ್ದು ಇದನ್ನು 'ಸಲ್‌ಸಬೀಲ್' ಎನ್ನಲಾಗುತ್ತದೆ.

عَيْنًا فِيهَا تُسَمَّىٰ سَلْسَبِيلًا ﴿١٨﴾

19. ಅವರ ಸೇವೆಗಾಗಿ ಸದಾ ಬಾಲಕರಾಗಿಯೇ ಇರುವಂತಹ ಬಾಲಕರು ಓಡಾಡುತ್ತಿರುವರು. ನೀವು ಅವರನ್ನು ಕಂಡರೆ ಹರಡಿರುವಂತಹ ಮುತ್ತುಗಳೆಂದೇ ಭಾವಿಸುವಿರಿ.

وَيَطُوفُ عَلَيْهِمْ وِلْدَٰنٌ مُّخَلَّدُونَ إِذَا رَأَيْتَهُمْ حَسِبْتَهُمْ لُؤْلُؤًا مَّنثُورًا ﴿١٩﴾

20. ಅಲ್ಲಿ ನೀವು ಎತ್ತ ದೃಷ್ಟಿ ಹರಿಸಿದರೂ ಅನುಗ್ರಹಗಳನ್ನೇ ಕಾಣುವಿರಿ ಮತ್ತು ಒಂದು ಬೃಹತ್ ಸಾಮ್ರಾಜ್ಯದ ಸಂಪತ್ ಸಾಮಗ್ರಿಗಳೇ ನಿಮಗೆ ಕಾಣಿಸುವುವು.

وَإِذَا رَأَيْتَ ثَمَّ رَأَيْتَ نَعِيمًا وَمُلْكًا كَبِيرًا ﴿٢٠﴾

21. ಅವರ ಮೈ ಮೇಲೆ ತೆಳ್ಳಗಿನ ರೇಶ್ಮೆಯ ಹಸಿರು ಉಡುಪು ಮತ್ತು ಜರತಾರಿ ಬಟ್ಟೆಗಳಿರುವುವು. ಅವರಿಗೆ ಬೆಳ್ಳಿಯ ಕಂಕಣಗಳನ್ನು ತೊಡಿಸಲಾಗುವುದು[9] ಮತ್ತು ಅವರ ಪ್ರಭು ಅವರಿಗೆ ನಿರ್ಮಲವಾದ ಮದಿರೆಯನ್ನು ಕುಡಿಸುವನು.

عَٰلِيَهُمْ ثِيَابُ سُندُسٍ خُضْرٌ وَإِسْتَبْرَقٌ ۖ وَحُلُّوٓا۟ أَسَاوِرَ مِن فِضَّةٍ وَسَقَىٰهُمْ رَبُّهُمْ شَرَابًا طَهُورًا ﴿٢١﴾

22. ನಿಮಗಿರುವ ಪ್ರತಿಫಲವಿದು. ನಿಮ್ಮ ಸಾಧನೆಯು ಗೌರವಾರ್ಹವೆಂದು ಪರಿಗಣಿಸಲ್ಪಟ್ಟಿದೆ.

إِنَّ هَٰذَا كَانَ لَكُمْ جَزَآءً وَكَانَ سَعْيُكُم مَّشْكُورًا ﴿٢٢﴾

ಇದರಿಂದ ಕೆಲವೊಮ್ಮೆ ಅಲ್ಲಿ ಬಂಗಾರದ ಪಾತ್ರೆಗಳು ಉಪಯೋಗಿಸಲ್ಪಟ್ಟರೆ ಮತ್ತೆ ಕೆಲವೊಮ್ಮೆ ಬೆಳ್ಳಿಯ ಪಾತ್ರೆಗಳು ಉಪಯೋಗಿಸಲ್ಪಡುತ್ತದೆಂದು ವ್ಯಕ್ತವಾಗುತ್ತದೆ.

7. ಅರ್ಥಾತ್- ಅದು ಬೆಳ್ಳಿಯೇ ಆಗಿದ್ದರೂ ಗಾಜಿನಂತೆ ಶುಭ್ರವಾಗಿರುವುದು.

8. ಅರಬ್ ನಿವಾಸಿಗಳು ಮದ್ಯದ ಜತೆಗೆ ಶುಂಠಿ ಬೆರೆಸಿದ ನೀರಿನ ಮಿಶ್ರಣವನ್ನು ಇಷ್ಟಪಡುತ್ತಿದ್ದರು. ಆದ್ದರಿಂದ ಅವರೊಡನೆ ಅಲ್ಲಿ ಅವರಿಗೆ ಶುಂಠಿ ಮಿಶ್ರಿತ ಮದ್ಯವನ್ನು ಕುಡಿಸಲಾಗುವುದು ಎಂದು ಹೇಳಲಾಗುತ್ತಿದೆ.

9. ಅಲ್ ಹಜ್ಜ್ ಅಧ್ಯಾಯದ 23ನೆಯ ಸೂಕ್ತ ಮತ್ತು ಸೂರಃ ಫಾತಿರ್‌ನ 33ನೆಯ ಸೂಕ್ತದಲ್ಲಿ ಅಲ್ಲಿ ಅವರಿಗೆ ಚಿನ್ನದ ಕಂಕಣವನ್ನು ತೊಡಿಸಲಾಗುವುದು ಎಂದು ಹೇಳಲಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ತಮ್ಮಿಚ್ಛೆಗೆ ಅನುಸಾರ ಕೆಲವೊಮ್ಮೆ ಅವರು ಚಿನ್ನದ ಕಂಕಣ ಧರಿಸಿದರೆ ಮತ್ತೆ ಕೆಲವೊಮ್ಮೆ ಬೆಳ್ಳಿಯ ಕಂಕಣ ಧರಿಸುವರು. ಹಾಗೆಯೇ ಮನಬಂದಾಗ ಎರಡನ್ನೂ ಸೇರಿಸಿ ಉಪಯೋಗಿಸುವರು.

23. ಸಂದೇಶವಾಹಕರೇ, ನಾವೇ ಈ ಕುರ್‌ಆನನ್ನು ನಿಮ್ಮ ಮೇಲೆ ಸ್ವಲ್ಪ ಸ್ವಲ್ಪವಾಗಿ ಅವತೀರ್ಣಗೊಳಿಸಿದ್ದೇವೆ.[10]

إِنَّا نَحْنُ نَزَّلْنَا عَلَيْكَ الْقُرْآنَ تَنْزِيلًا ۝٢٣

24. ಆದುದರಿಂದ ನೀವು ನಿಮ್ಮ ಪ್ರಭುವಿನ ಅಪ್ಪಣೆಯ ವಿಷಯದಲ್ಲಿ ತಾಳ್ಮೆ ವಹಿಸಿರಿ[11] ಮತ್ತು ಇವರ ಪೈಕಿ ಯಾವುದೇ ಕರ್ಮಭ್ರಷ್ಟ ಅಥವಾ ಸತ್ಯನಿಷೇಧಿ ವ್ಯಕ್ತಿಯ ಮಾತನ್ನು ಅನುಸರಿಸಬೇಡಿರಿ.

فَاصْبِرْ لِحُكْمِ رَبِّكَ وَلَا تُطِعْ مِنْهُمْ آثِمًا أَوْ كَفُورًا ۝٢٤

25. ಸಂಜೆ-ಮುಂಜಾನೆಗಳಲ್ಲಿ ನಿಮ್ಮ ಪ್ರಭುವಿನ ನಾಮವನ್ನು ಸ್ಮರಿಸಿರಿ.

وَاذْكُرِ اسْمَ رَبِّكَ بُكْرَةً وَأَصِيلًا ۝٢٥

26. ಇರುಳಲ್ಲೂ ಅವನ ಮುಂದೆ ಸಾಷ್ಟಾಂಗವೆರಗಿರಿ ಮತ್ತು ರಾತ್ರಿಯ ದೀರ್ಘ ಸಮಯದಲ್ಲಿ ಅವನನ್ನು ಜಪಿಸುತ್ತಲಿರಿ.[12]

وَمِنَ اللَّيْلِ فَاسْجُدْ لَهُ وَسَبِّحْهُ لَيْلًا طَوِيلًا ۝٢٦

27. ಇವರಂತು ಶೀಘ್ರ ಪ್ರಾಪ್ತವಾಗುವ ವಸ್ತುವನ್ನು (ಇಹಲೋಕವನ್ನು) ಪ್ರೀತಿಸುತ್ತಾರೆ ಮತ್ತು ಮುಂದೆ ಬರಲಿರುವ ಮಹಾ ದಿನವನ್ನು ಕಡೆಗಣಿಸುತ್ತಾರೆ.

إِنَّ هَٰؤُلَاءِ يُحِبُّونَ الْعَاجِلَةَ وَيَذَرُونَ وَرَاءَهُمْ يَوْمًا ثَقِيلًا ۝٢٧

28. ನಾವೇ ಇವರನ್ನು ಸೃಷ್ಟಿಸಿರುತ್ತೇವೆ ಮತ್ತು ಇವರ ಸಂದುಗಳನ್ನು ಬಲಾಢ್ಯಗೊಳಿಸಿದ್ದೇವೆ. ನಾವಿಚ್ಛಿಸಿದಾಗ ಇವರ ರೂಪಗಳನ್ನು ಬದಲಿಸಿ ಬಿಡಬಲ್ಲೆವು.

نَحْنُ خَلَقْنَاهُمْ وَشَدَدْنَا أَسْرَهُمْ ۖ وَإِذَا شِئْنَا بَدَّلْنَا أَمْثَالَهُمْ تَبْدِيلًا ۝٢٨

29. ಇದೊಂದು ಬೋಧನೆಯಾಗಿದೆ. ಇನ್ನು ಇಷ್ಟ ಉಳ್ಳವನು ತನ್ನ ಪ್ರಭುವಿನ ಕಡೆಗೆ ಹೋಗುವ ಮಾರ್ಗವನ್ನು ಅನುಸರಿಸಲಿ.

إِنَّ هَٰذِهِ تَذْكِرَةٌ ۖ فَمَنْ شَاءَ اتَّخَذَ إِلَىٰ رَبِّهِ سَبِيلًا ۝٢٩

30. ಮತ್ತು ಅಲ್ಲಾಹನು ಇಚ್ಛಿಸುವ ತನಕ, ನೀವು ಇಚ್ಛಿಸುವುದರಿಂದ ಏನೂ ನಡೆಯದು. ಖಂಡಿತವಾಗಿಯೂ ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَمَا تَشَاءُونَ إِلَّا أَنْ يَشَاءَ اللَّهُ ۚ إِنَّ اللَّهَ كَانَ عَلِيمًا حَكِيمًا ۝٣٠

10. ಇಲ್ಲಿ ಪ್ರವಾದಿವರ್ಯರನ್ನುದ್ದೇಶಿಸಿ(ಸ) ಈ ಮಾತು ಹೇಳಲಾಗಿರುವಂತೆ ಗೋಚರಿಸುತ್ತದೆ. ಆದರೆ ನಿಜವಾಗಿ ಸತ್ಯನಿಷೇಧಿಗಳ ಒಂದು ಆಕ್ಷೇಪಕ್ಕೆ ಉತ್ತರ ನೀಡಲಾಗುತ್ತಿದೆ. ಪ್ರವಾದಿವರ್ಯರು(ಸ) ಚಿಂತನ-ಮಂಥನ ನಡೆಸಿ ಈ ಕುರ್‌ಆನನ್ನು ರಚಿಸುತ್ತಿದ್ದಾರೆ. ಅನ್ಯಥಾ ಅಲ್ಲಾಹನ ವತಿಯಿಂದ ಯಾವುದೇ ಆದೇಶ ಬರುವುದಿದ್ದರೆ ಒಮ್ಮೆಲೇ ಸಂಪೂರ್ಣವಾಗಿ ಬರುತ್ತಿತ್ತು ಎಂದು ಅವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.

11. ಅರ್ಥಾತ್- ಯಾವ ಮಹತ್ಕಾರ್ಯಕ್ಕಾಗಿ ನಿಮ್ಮ ಪ್ರಭು ನಿಮ್ಮನ್ನು ನೇಮಿಸಿದ್ದಾನೋ ಅದರ ಬವಣೆ-ಬಳಲಿಕೆಗಳ ಬಗ್ಗೆ ತಾಳ್ಮೆ ವಹಿಸಿರಿ. ನಿಮಗೆ ಎದುರಾಗುವ ಎಲ್ಲಾ ವಿಷಯಗಳನ್ನು ಧೈರ್ಯದಿಂದ ಸಹಿಸಿಕೊಳ್ಳುತ್ತಾ ಸಾಗಿರಿ. ನಿಮ್ಮ ಪಾದಗಳು ಎಂದೂ ವಿಚಲಿತವಾಗದಂತೆ ನೋಡಿಕೊಳ್ಳಿರಿ.

12. ಸಮಯದ ನಿರ್ಧಾರದ ಜತೆಗೆ ಅಲ್ಲಾಹನ ಸ್ಮರಣೆಯ ಆದೇಶ ಕೊಡಲಾದರೆ ಅದರರ್ಥ ನಮಾಝ್ ಆಗಿದೆ. ಈ ಸೂಕ್ತದಲ್ಲಿ ಮೊಟ್ಟ ಮೊದಲು, 'ವದ್‌ಕುರಿಸ್ಮ ರಬ್ಬಿಕ ಬುಕ್‌ರತನ್‌ವ ಅಸೀಲ' ಎಂದು ಹೇಳಲಾಗಿದೆ. 'ಬುಕ್‌ರಃ' ಎಂದು ಅರಬಿ ಭಾಷೆಯಲ್ಲಿ ಪ್ರಭಾವಕ್ಕೆ ಹೇಳಲಾಗುತ್ತದೆ. 'ಅಸೀಲ' ಎಂಬ ಪದವನ್ನು ಸೂರ್ಯ ನಡುನೆತ್ತಿಯಿಂದ ಸರಿಯುವುದರಿಂದ ಹಿಡಿದು ಸೂರ್ಯಾಸ್ತಮಾನದ ವರೆಗಿನ ಅವಧಿಗೆ ಉಪಯೋಗಿಸಲಾಗುತ್ತದೆ. ಅದರಲ್ಲಿ ಝುಹರ್ ಮತ್ತು ಅಸರ್ ನಮಾಝಿನ ಅವಧಿ ಸೇರಿದೆ. ಅನಂತರ 'ವಮಿನಲ್ಲೈಲಿ

31. ಅವನು ತಾನಿಚ್ಛಿಸಿದವರನ್ನು ತನ್ನ ಕೃಪಾಶ್ರಯದಲ್ಲಿ ಸೇರಿಸಿಕೊಳ್ಳು ತ್ತಾನೆ ಮತ್ತು ಅಕ್ರಮಿಗಳಿಗಾಗಿ ಅವನು ವೇದನಾಯುಕ್ತ ಯಾತನೆಯನ್ನು ಸಿದ್ಧಗೊಳಿಸಿ ಇಟ್ಟಿರುತ್ತಾನೆ.

يُدۡخِلُ مَن يَشَآءُ فِي رَحۡمَتِهِۦۚ وَٱلظَّٰلِمِينَ أَعَدَّ لَهُمۡ عَذَابًا أَلِيمَۢا ﴿٣١﴾

ಫಸ್ಜುದ್ ಲಹು' ಎಂದು ಹೇಳಲಾಗಿದೆ. ರಾತ್ರಿಯ ಅವಧಿ ಸೂರ್ಯಾಸ್ತಮಾನದ ನಂತರದಿಂದ ಆರಂಭವಾಗುತ್ತದೆ. ಆದ್ದರಿಂದ ರಾತ್ರಿಯ ಸಾಷ್ಟಾಂಗದ ಆದೇಶದಲ್ಲಿ ಮಗ್ರಿಬ್ ಮತ್ತು ಇಷಾ ನಮಾಝಿನ ವೇಳೆಗಳು ಸೇರುತ್ತವೆ. ಅನಂತರ 'ರಾತ್ರಿಯ ದೀರ್ಘ ಸಮಯದಲ್ಲಿ ಅವನನ್ನು ಜಪಿಸುತ್ತಲಿರಿ' ಎಂದು ಹೇಳಲಾಗಿರುವುದು 'ತಹಜ್ಜುದ್' ನಮಾಝ್‌ನ ಕಡೆಗಿರುವ ಸ್ಪಷ್ಟವಾದ ಸೂಚನೆಯಾಗಿದೆ.